**ಕರ್ನಾಟಕ ವಿಧಾನ ಪರಿಷತ್ತು**

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1239**

**ಮಾನ್ಯ ಸದಸ್ಯರ ಹೆಸರು : ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ.**

**(ವಿಧಾನಸಭೆಯಿಂದ ಚುನಾಯಿತರಾದವರು)**

**ಉತ್ತರಿಸಬೇಕಾದ ದಿನಾಂಕ : 17.12.2025**

**ಉತ್ತರಿಸಬೇಕಾದ ಸಚಿವರು : ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು.**

| ಕ್ರ, ಸಂ, | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ರಾಜ್ಯದಲ್ಲಿ ಅಪ್ಪಟ ದೇಶಿ ಗೋ ತಳಿಗಳ ಸಂರಕ್ಷಣೆ ಅಭಿವೃದ್ಧಿಗೆ ಸರ್ಕಾರ ರೂಪಿಸಿರುವ ಯೋಜನೆ ಮತ್ತು ಕಾರ್ಯಕ್ರಮಗಳೇನು: | ರಾಜ್ಯದಲ್ಲಿ ಅಪ್ಪಟ ದೇಶಿ ಗೋ ತಳಿಗಳ ಸಂರಕ್ಷಣೆ ಅಭಿವೃದ್ಧಿಗೆ ಸರ್ಕಾರ ರೂಪಿಸಿರುವ ಯೋಜನೆ ಮತ್ತು ಕಾರ್ಯಕ್ರಮಗಳ ವಿವರಗಳನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ. |
| ಆ) | ಪ್ರಸ್ತುತ ರಾಜ್ಯದಲ್ಲಿ ಎಷ್ಟು ಅಪ್ಪಟ ದೇಶಿ ಗೋ ತಳಿಗಳಿವೆ ಮತ್ತು ಪ್ರತಿಯೊಂದು ಅಪ್ಪಟ ದೇಶಿ ಗೋ ತಳಿಯಡಿ ಇರುವ ಗೋವುಗಳ ಸಂಖ್ಯೆ ಎಷ್ಟು ಹಾಗೂ ಸದರಿ ಅಪ್ಪಟ ದೇಶಿ ಗೋ ತಳಿಗಳ ಮಹತ್ವ ಹಾಗೂ ವಿಶೇಷತೆ ಸಾರಲು ಇಲಾಖೆ ಕೈಗೊಂಡಿರುವ ಕ್ರಮಗಳೇನು: | ರಾಜ್ಯದಲ್ಲಿ ಒಟ್ಟು 09 ಅಪ್ಪಟ ದೇಶಿ ಗೋ ತಳಿಗಳಿವೆ ಅಪ್ಪಟ ದೇಶಿ ಗೋ ತಳಿಯಡಿಯಲ್ಲಿನ ಗೋವುಗಳ ಸಂಖ್ಯೆ ವಿವರವನ್ನು ಅನುಬಂಧ-2 ರಲ್ಲಿ ಲಗತ್ತಿಸಿದೆ.<br><br>ಹಾಗೂ ಅಪ್ಪಟ ದೇಶಿಯ ಗೋ ತಳಿಗಳ ಮಹತ್ವ ಹಾಗೂ ವಿಶೇಷತೆ ಸಾರಲು ಇಲಾಖೆ ಕೈಗೊಂಡಿರುವ ಕ್ರಮಗಳನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ. |
| ಇ) | 2024-25 ನೇ ಸಾಲಿನಲ್ಲಿ ಸದರಿ ಅಪ್ಪಟ ದೇಶಿ ಗೋ ತಳಿಗಳ ಸಂರಕ್ಷಣೆ ಹಾಗೂ ಅಭಿವೃದ್ಧಿಗೆ ಸರ್ಕಾರ ವಿನಿಯೋಗಿಸಿರುವ ಅನುದಾನವೆಷ್ಟು: ಹಾಗೂ ಸದರಿ ಅನುದಾನದ ಮೂಲಕ ಅನುಷ್ಠಾನಗೊಳಿಸಿರುವ ಕಾರ್ಯಕ್ರಮಗಳು ಯಾವುವು ? (ವಿವರ ನೀಡುವುದು) | 2024-25 ನೇ ಸಾಲಿನಲ್ಲಿ ಸದರಿ ಅಪ್ಪಟ ದೇಶೀಯ ಗೋ ತಳಿ ಸಂವರ್ಧನಾ ಕೇಂದ್ರಗಳಿಗೆ ವಿನಿಯೋಗಿಸಿರುವ ಅನುದಾನದ ವಿವರಗಳನ್ನು ಅನುಬಂಧ-3 ರಲ್ಲಿ ಲಗತ್ತಿಸಿದೆ. |

| | | |
|---|---|---|
| ಈ) | ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಂಡು ಬರುವ ಅಪ್ಪಟ ದೇಶಿ ಗೋ ತಳಿಗಳು ಯಾವುವು:ಜಿಲ್ಲೆಯಲ್ಲಿ ಪ್ರಸ್ತುತ ಪ್ರತಿಯೊಂದು ಅಪ್ಪಟ ದೇಶಿ ಗೋ ತಳಿಯಡಿ ಇರುವ ಗೋವುಗಳ ಸಂಖ್ಯೆ ಎಷ್ಟು: | 20ನೇ ಜಾನುವಾರು ಗಣತಿ ಪ್ರಕಾರ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಂಡು ಬರುವ ಅಪ್ಪಟ ದೇಶಿ ಗೋ ತಳಿಗಳ ವಿವರ ಹಾಗೂ ಗೋವುಗಳ ಸಂಖ್ಯೆ ಈ ಕೆಳಕಂಡಂತಿದೆ.<br><br>**ಅಪ್ಪಟ ದೇಶಿ ಗೋತಳಿಗಳ ಹೆಸರು** — **ಗೋತಳಿಗಳ ಸಂಖ್ಯೆ**<br>ಹಳ್ಳಿಕಾರ್ — 34<br>ಅಮೃತ್ ಮಹಲ್ — 433<br>ದೇವಣಿ — 471<br>ಗಿರ್ — 634<br>ಖಿಲ್ಲಾರ್ — 04<br>ಕೃಷ್ಣವ್ಯಾಲಿ — 13<br>ಮಲ್ನಾಡ್ ಗಿಡ್ಡ — 38816<br>ಒಂಗೋಲ್ — 09<br>ಸಾಯಿವಾಲ್ — 123 |
| ಉ) | ಜಿಲ್ಲೆಯಲ್ಲಿ ಅಪ್ಪಟ ದೇಶಿ ಗೋ ತಳಿಗಳನ್ನು ಸಾಕುವಂತೆ ರೈತರನ್ನು ಉತ್ತೇಜಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ಹಾಗೂ ಈ ಸಂಬಂಧ ರೈತರಿಗೆ ನೀಡುತ್ತಿರುವ ಸೌಲಭ್ಯ ಹಾಗೂ ನೆರವುಗಳೇನು? | ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರಾಷ್ಟ್ರೀಯ ಗೋಕುಲ್ ಮಿಷನ್ ಅಡಿಯಲ್ಲಿ ಮಲೆನಾಗಿಡ್ಡ ದೇಶಿ ಗೋತಳಿಗಳನ್ನು ಜಾನುವಾರು ತಳಿ ಸಂವರ್ಧನ ಮತ್ತು ತರಬೇತಿ ಕೇಂದ್ರ, ಕೊಯ್ಲಾ ಇಲ್ಲಿ ಸಂರಕ್ಷಿಸಲಾಗುತ್ತಿದ್ದು, ಅವುಗಳಿಂದ ಹುಟ್ಟಿದ ಹೆಣ್ಣುಕರುಗಳನ್ನು ಅಮೃತಿ ಸಿರಿ ಮತ್ತು ಗಂಡು ಕರುಗಳನ್ನು ಅಮೃತಧಾರ ಯೋಜನೆಯಡಿಯಲ್ಲಿ ಪುಸ್ತಕ ಬೆಲೆಯ ಶೇ. 25 ರ ಬೆಲೆಗೆ ರೈತರಿಗೆ ವಿತರಿಸಲಾಗುತ್ತಿದೆ.<br>ದೇಶಿ ತಳಿಗಳ ಮೂತ್ರ ಮತ್ತು ಸೆಗಣಿಯಿಂದ ತಯಾರಿಸಬಹುದಾದ ಮೌಲ್ಯವರ್ಧಿತ ಉತ್ಪನ್ನಗಳು ಹಾಗೂ ಅವುಗಳ ಔಷಧೀಯ ಗುಣಗಳ ಕುರಿತು ರೈತರಿಗೆ ಅರಿವು ಮೂಡಿಸಲಾಗುತ್ತಿದೆ. |

**ಪಸಂಮೀ 278 ಸಲೆವಿ 2025**

(signature)

**(ಕೆ. ವೆಂಕಟೇಶ್)**

ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು

ಚುಕ್ಕೆ ರಹಿತ ಪ್ರ.ಸಂ. 1239

## ಅನುಬಂಧ-1

**ಅಪ್ಪಟ ದೇಶಿ ಗೋ ತಳಿಗಳ ಸಂರಕ್ಷಣೆ, ಅಭಿವೃದ್ದಿಗೆ ಸರ್ಕಾರ ರೂಪಿಸಿರುವ ಯೋಜನೆಗಳು ಮತ್ತು ಅವುಗಳ ವಿಶೇಷತೆ ಸಾರಲು ಕೈಗೊಂಡಿರುವ ಕ್ರಮಗಳು**

| | |
|---|---|
| 1 | ದೇಶಿ ಗೋ ತಳಿಗಳ ಸಂಕ್ಷಣೆ ಮತ್ತು ಅಭಿವೃದ್ಧಿಗೆ ಕ್ಷೇತ್ರಗಳನ್ನು (Farms) ನಿರ್ವಹಣೆ ಮಾಡಲಾಗುತ್ತಿದೆ. |
| 2 | ಉತ್ಕೃಷ್ಟ ತಳಿಗುಣಗಳ ಶುದ್ಧ ದೇಶಿ ಗೋ ತಳಿಯ ಹೋರಿಗಳನ್ನು ಇಲಾಖಾ ಕ್ಷೇತ್ರಗಳಲ್ಲಿ ನಿರ್ವಹಿಸಲಾಗುತ್ತಿದೆ. |
| 3 | ರಾಜ್ಯದ ದೇಶಿ ಗೋತಳಿ ಜಾನುವಾರುಗಳ ಸಂರಕ್ಷಣೆ ಮತ್ತು ಸಂವರ್ಧನೆಗಾಗಿ ಪ್ರತ್ಯೇಕ ಜಾನುವಾರು ಕ್ಷೇತ್ರಗಳ ಸ್ಥಾಪನೆ ಮತ್ತು ನಿರ್ವಹಣೆ. ದೇಶೀ ತಳಿಗಳ ರಾಸುಗಳ ವೀರ್ಯ ಸಂಸ್ಕರಣೆಗೆ ದೇಶಿ ತಳಿಗಳ ಉತ್ಕೃಷ್ಟ ಗಂಡು ಕರುಗಳನ್ನು ಸಂವರ್ಧನಾ ಕ್ಷೇತ್ರಗಳಲ್ಲಿ ಉತ್ಪಾದಿಸಿ ವೀರ್ಯ ಸಂಸ್ಕರಣಾ ಕೇಂದ್ರಗಳಿಗೆ ನೀಡಲಾಗುತ್ತಿದೆ. |
| 4 | ದೇಶಿ ಗೋತಳಿಯ ರಾಸುಗಳ ಸಂರಕ್ಷಣೆಗಾಗಿ ಪಾರಂಪರಿಕವಾಗಿ ಮೀಸಲಿಡಲಾದ ಕಾವಲು ಭೂಮಿಯ ನಿರ್ವಹಣೆ, ಸದರಿ ಕಾವಲುಗಳಲ್ಲಿ ನಿಗದಿತ ತಳಿಯ ರಾಸುಗಳ ಪಾರಂಪರಿಕ ಪದ್ಧತಿಯ ಸಂಗೋಪನೆ, ಕಾವಲು ಭೂಮಿಯನ್ನು ಮೇವಿನ ಬೆಳೆಗಾಗಿ ಅಭಿವೃದ್ಧಿ ಪಡಿಸಲಾಗುತ್ತಿದೆ. |
| 5 | ರಾಜ್ಯದಲ್ಲಿ ದೇಶಿ ಗೋತಳಿಗಳ ಸಾಕಾಣಿಕೆ , ಸಂವರ್ಧನೆ ಮತ್ತು ನಿರ್ವಹಣೆ ಕುರಿತು ರೈತರಿಗೆ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. |
| 6 | ದೇಶಿ ಗೋತಳಿ ಸಂರಕ್ಷಣೆ ಮತ್ತು ಸಂವರ್ಧನೆಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ಯೋಜನೆಗಳ ಅನುಷ್ಠಾನ ಮತ್ತು ಮೇಲ್ವಿಚಾರಣೆ ಮಾಡಲಾಗುತ್ತಿದೆ. |
| 7 | ಇಲಾಖೆಯ ಪಶುವೈದ್ಯಕೀಯ ಸಂಸ್ಥೆಗಳಲ್ಲಿ ದೇಶೀ ತಳಿಗಳ ವೀರ್ಯ ನಳಿಕೆಗಳನ್ನು ಉಪಯೋಗಿಸಿ ಅದೇ ದೇಶೀ ತಳಿಗಳ ಜಾನುವಾರುಗಳಿಗೆ ಕೃತಕ ಗರ್ಭಧಾರಣೆ ಮಾಡಲಾಗುತ್ತದೆ. |
| 8 | ವಿವಿಧ ದೇಶಿ ಗೋತಳಿಗಳ ಉತ್ಕೃಷ್ಟ ಹಾಗೂ ಹೆಚ್ಚುವರಿ ಹೋರಿಗಳನ್ನು ಹರಾಜಿನ ಮೂಲಕ ಆಸಕ್ತ ರೈತರಿಗೆ ತಳಿಸಂವರ್ಧನೆಗಾಗಿ ನೀಡಲಾಗುತ್ತಿದೆ. |
| 9 | ದೇಶಿ ತಳಿಗಳ ಮೂತ್ರ ಮತ್ತು ಸಗಣಿಯಿಂದ ತಯಾರಿಸಬಹುದಾದ ಮೌಲ್ಯವರ್ಧಿತ ಉತ್ಪನ್ನಗಳು ಹಾಗೂ ಅವುಗಳ ಔಷಧೀಯ ಗುಣಗಳ ಕುರಿತು ರೈತರಿಗೆ ಅರಿವು ಮಾಡಿಸಲಾಗುತ್ತಿದೆ. |
| 10 | ಅಮೃತ ಸಿರಿ ಯೋಜನೆಯಡಿಯಲ್ಲಿ ಆಸಕ್ತ ರೈತರಿಗೆ ದೇಶೀಯ ಗೋತಳಿಗಳ ಹೆಣ್ಣು ರಾಸುಗಳನ್ನು ಪುಸ್ತಕ ಬೆಲೆಯ ಶೇ 25 ರ ಬೆಲೆಗೆ ವಿತರಿಸಲಾಗುತ್ತಿದೆ. |
| 11 | 2021-22ನೇ ಸಾಲಿನಲ್ಲಿ ಗೋ ಸಂಕುಲ ಸಮೃದ್ಧಿ ಯೋಜನೆ ಅಡಿಯಲ್ಲಿ ಇತರೆ ರಾಜ್ಯಗಳ ದೇಸೀ ತಳಿಗಳಾದ ದೇವಣಿ, ಗಿರ್, ಸಾಹಿವಾಲ್, ಒಂಗೋಲ್ ತಳಿಗಳನ್ನು ರಾಜ್ಯದ ರೈತರಿಗೆ ಪರಿಚಯಿಸಲು ಇಲಾಖಾ ಕ್ಷೇತ್ರಗಳಲ್ಲಿ ನಿರ್ವಹಿಸಲಾಗುತ್ತಿದೆ. |

Q. No. 1239

<u>ಅನುಬಂಧ-2</u>

ರಾಜ್ಯದಲ್ಲಿ ಪ್ರಸ್ತುತ ಇರುವ ವಿವಿಧ ಅಪ್ಪಟ ದೇಶೀಯ ಗೋ ತಳಿಗಳ ವಿವರ

| ಕ್ರ. ಸಂ. | ರಾಜ್ಯದಲ್ಲಿರುವ ಅಪ್ಪಟ ದೇಶೀಯ ಗೋತಳಿಗಳ ಹೆಸರು | ರಾಜ್ಯದಲ್ಲಿರುವ ದೇಶೀಯ ಗೋತಳಿಗಳ ಸಂಖ್ಯೆ (20 ನೇ ಜಾನುವಾರು ಗಣತಿ ಪ್ರಕಾರ) |
|---|---|---|
| 1 | ಕೃಷ್ಣಾವ್ಯಾಲಿ | 2523 |
| 2 | ಮಲೆನಾಡು ಗಿಡ್ಡ | 631523 |
| 3 | ಗಿರ್ | 8123 |
| 4 | ಓಂಗೋಲ್ | 3967 |
| 5 | ದೇವಣಿ | 43385 |
| 6 | ಖಿಲಾರ್ | 261144 |
| 7 | ಹಳ್ಳಿಕಾರ್ | 480347 |
| 8 | ಸಾಹಿವಾಲ್ | 676 |
| 9 | ಅಮೃತ್ ಮಹಲ್ | 104663 |
| | | 1536351 |

0

Q.No. 1239

ಅನುಬಂಧ-3

2024-25 ನೇ ಸಾಲಿನಲ್ಲಿ ಅಪ್ಪಟ ದೇಶಿ ಗೋತಳಿಗಳನ್ನು ಸಂರಕ್ಷಣೆ ಮತ್ತು ಅಭಿವೃದ್ಧಿ ಮಾಡುತ್ತಿರುವ ಕ್ಷೇತ್ರಗಳಿಗೆ ವಿನಿಯೋಗಿಸಿರುವ ಅನುದಾನದ ವಿವರ

| ಕ್ರ. ಸಂ. | ಕೇಂದ್ರದ ಹೆಸರು | ನಿರ್ವಹಿಸುತ್ತಿರುವ ಅಪ್ಪಟ ದೇಶಿ ಗೋ ತಳಿಗಳು | 2024-25 ನೇ ಸಾಲಿನಲ್ಲಿ ಸದರಿ ಅಪ್ಪಟ ದೇಶಿಯ ಗೋ ತಳಿಗಳ ಸಂರಕ್ಷಣೆ ಹಾಗೂ ಅಭಿವೃದಿಗೆ ವಿನಿಯೋಗಿಸಿದ ಅನುದಾನದ ವಿವರಗಳು (ರೂ. ಲಕ್ಷಗಳಲ್ಲಿ) |
|---|---|---|---|
| 1 | ಜಾನುವಾರು ತಳಿ ಸಂವರ್ಧನಾ ಕೇಂದ್ರ, ತೇಗೂರು, , ಧಾರವಾಡ ಜಿ. | ಕೃಷ್ಣವ್ಯಾಲಿ | 112.90 |
| 2 | ಜಾನುವಾರು ಸಂವರ್ಧನಾ ಮತ್ತು ತರಬೇತಿ ಕೇಂದ್ರ, ಕೊಯ್ಲಾ, ದಕ್ಷಿಣ ಕನ್ನಡ ಜಿ. | ಮಲೆನಾಡು ಗಿಡ್ಡ | 92.83 |
| 3 | ಕಡಸು ಉತ್ಪಾದನಾ ಮತ್ತು ತರಬೇತಿ ಕೇಂದ್ರ, ಬರಗಿ, , ಚಾಮರಾಜನಗರ ಜಿ. | ಗಿರ್ | 53.35 |
| 4 | ಜಾನುವಾರು ಸಂವರ್ಧನಾ ಮತ್ತು ತರಬೇತಿ ಕೇಂದ್ರ, ಕುರೇಕುಪ್ಪೆ, , ಬಳ್ಳಾರಿ ಜಿ. | ದೇವಣಿ ಒಂಗೋಲ್ | 28.59 |
| 5 | ಖಿಲಾರ್ ತಳಿ ಗೋವು ಸಂವರ್ಧನಾ ಕೇಂದ್ರ, ಬಂಕಾಪುರ, ಹಾವೇರಿ ಜಿ. | ಖಿಲಾರಿ | 62.20 |
| 6 | ಹಳ್ಳಿಕಾರ್ ತಳಿ ಸಂವರ್ಧನಾ ಕೇಂದ್ರ, ಕುಣಿಕೇನಹಳ್ಳಿ, , ತುಮಕೂರು ಜಿ. | ಹಳ್ಳಿಕಾರ್ | 108.78 |
| 7 | ಅಮೃತ್ ಮಹಲ್ ತಳಿ ಸಂವರ್ಧನಾ ಉಪಕೇಂದ್ರ, ಹುಲ್ಲೇನಹಳ್ಳಿ, ತುರುವೇಕೆರೆ | ಹಳ್ಳಿಕಾರ್ | 30.12 |
| 8 | ಜಾನುವಾರು ಸಂವರ್ಧನಾ ಮತ್ತು ತರಬೇತಿ ಕೇಂದ್ರ, ಕೂಡಿಗೆ, ಕೊಡಗು ಜಿ. | ಸಾಹಿವಾಲ್, | 57.60 |
| 9 | ಅಮೃತ್ ಮಹಲ್ ತಳಿ ಸಂವರ್ಧನಾ ಕೇಂದ್ರ, ಅಜ್ಜಂಪುರ, ಚಿಕ್ಕಮಗಳೂರು ಜಿ. | ಅಮೃತ್ ಮಹಲ್ | 73.97 |
| 10 | ಅಮೃತ್ ಮಹಲ್ ತಳಿ ಸಂವರ್ಧನಾ ಉಪಕೇಂದ್ರ, ಬೀರೂರು, ಚಿಕ್ಕಮಗಳೂರು ಜಿ. | ಅಮೃತ್ ಮಹಲ್ | 56.65 |
| 11 | ಅಮೃತ್ ಮಹಲ್ ತಳಿ ಸಂವರ್ಧನಾ ಉಪಕೇಂದ್ರ, ಚಿಕ್ಕಎಮ್ಮಿಗನೂರು, ಚಿತ್ರದುರ್ಗ ಜಿ. | ಅಮೃತ್ ಮಹಲ್ | 51.17 |
| 12 | ಅಮೃತ್ ಮಹಲ್ ತಳಿ ಸಂವರ್ಧನಾ ಉಪಕೇಂದ್ರ, ಲಿಂಗದಹಳ್ಳಿ, , ಚಿಕ್ಕಮಗಳೂರು ಜಿ. | ಅಮೃತ್ ಮಹಲ್ | 46.42 |
| 13 | ಅಮೃತ್ ಮಹಲ್ ತಳಿ ಸಂವರ್ಧನಾ ಉಪಕೇಂದ್ರ, ಬಿಳುವಾಲ, , ಚಿಕ್ಕಮಗಳೂರು ಜಿ. | ಅಮೃತ್ ಮಹಲ್ | 46.04 |
| 14 | ಅಮೃತ್ ಮಹಲ್ ತಳಿ ಸಂವರ್ಧನಾ ಉಪಕೇಂದ್ರ, ಬಾಸೂರು, ಚಿಕ್ಕಮಗಳೂರು ಜಿ. | ಅಮೃತ್ ಮಹಲ್ | 45.18 |
| 15 | ಅಮೃತ್ ಮಹಲ್ ತಳಿ ಸಂವರ್ಧನಾ ಉಪಕೇಂದ್ರ, ಬಿದರೆ, ಹಾಸನ ಜಿ. | ಅಮೃತ್ ಮಹಲ್ | 54.09 |
| 16 | ಅಮೃತ್ ಮಹಲ್ ತಳಿ ಸಂವರ್ಧನಾ ಉಪಕೇಂದ್ರ, ರಾಯಸಂದ್ರ, ಹಾಸನ ಜಿ. | ಅಮೃತ್ ಮಹಲ್ | 31.48 |
| 17 | ಅಮೃತ್ ಮಹಲ್ ತಳಿ ಸಂವರ್ಧನಾ ಉಪಕೇಂದ್ರ, ಹಬ್ಬನಘಟ್ಟ, ಹಾಸನ ಜಿ. | ಅಮೃತ್ ಮಹಲ್ | 50.15 |
| 18 | ಅಮೃತ್ ಮಹಲ್ ತಳಿ ಸಂವರ್ಧನಾ ಉಪಕೇಂದ್ರ, ಕೈನೋಡು, ಚಿತ್ರದುರ್ಗ ಜಿ. | ಅಮೃತ್ ಮಹಲ್ | 42.67 |
| 19 | ಅಮೃತ್ ಮಹಲ್ ತಳಿ ಸಂವರ್ಧನಾ ಉಪಕೇಂದ್ರ, ರಾಮಗಿರಿ, ಚಿತ್ರದುರ್ಗ ಜಿ. | ಅಮೃತ್ ಮಹಲ್ | 46.05 |
| | ಒಟ್ಟು | | **1090.24** |